(ಆ) ಪಾಸ್ ಬುಕ್‌ಗಳನ್ನು ಪಡೆಯುವಲ್ಲಿ ರೈತರು ತೋರಿಸಿದ ಪ್ರತಿಕ್ರಿಯೆ ಪ್ರೋತ್ಸಾಹಕರವಾಗಿದೆ. ಪ್ರಾಯೋಗಿಕವಾಗಿ ೧-೧೧-೧೯೮೬ರಂದು ಬೆಂಗಳೂರು ವಿಭಾಗದ, ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು. ಮೈಸೂರು ವಿಭಾಗದ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು, ಬೆಳಗಾವಿ ವಿಭಾಗದ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು ಹಾಗೂ ಗುಲಬರ್ಗ ವಿಭಾಗದ ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗ ತಾಲ್ಲೂಕಿನಲ್ಲಿ ಈ ಯೋಜನೆಯನ್ನು ಆರಂಭಿಸಲಾಗಿದೆ.

(ಇ) ಹೌದು. ರೈತನು ಹೊಂದಿರುವ ಸ್ತ್ರೀರಾಶ್ತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳಿಂದ ಭೂಮಿಯ ಮೇಲೆ ಸಾಲ ಸೌಲಭ್ಯ ಪಡೆಯಲು ಆವಶ್ಯಕವಾದ ಎಲ್ಲಾ ಮಾಹಿತಿಗಳನ್ನು ಪಾಸ್ ಬುಕ್‌ನಲ್ಲಿ ನಮೂದಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರ ಬಯಸಿದ ಪ್ರಶ್ನೆಗಳ ಮತ್ತು ಉತ್ತರಗಳ ಪೂರ್ಣಪತ್ರಮೂರನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮಂಡಿಸಲಾಗಿದೆ.

ಮೈಸೂರು ಜಿಲೆ ಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇರುವ ಬಗ್ಗೆ

೧೮೬೩. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮೈಸೂರು ಜಿಲ್ಲೆಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇರುವುದು ನಿಜವೇ ? ಈ ಹುದ್ದೆಗಳನ್ನು ಭರ್ತಿ ಮಾಡಲು ಸಂದರ್ಶನ ಮಾಡಲಾಗಿದೆಯೇ ?

(ಆ) ಸಂದರ್ಶನ ಮಾಡಿದ್ದರೂ ಇನ್ನೂ ಭರ್ತಿ ಮಾಡದಿರಲು ಕಾರಣಗಳೇನು ?

(ಇ) ಸದರಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲಾಗುವುದೆಂದು ಕಳೆದ ಅಧಿವೇಶನದಲ್ಲಿ ಅನೇಕ ಬಾರಿ ಭರವಸೆ ನೀಡಿದರುವುದು ನಿಜವೇ ?

(ಈ) ಹಾಗಿದ್ದಲ್ಲಿ, ಸರ್ಕಾರದವರು ಕೈಗೊಂಡ ಕ್ರಮವೇನು ?

(ಉ) ಹಾಗಿಲ್ಲದಿದ್ದಲ್ಲಿ, ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

(ಅ) ನಿಜ. ಸಂದರ್ಶನ ಮಾಡಲಾಗಿತ್ತು. ಮೈಸೂರು ಜಿಲ್ಲೆಯಲ್ಲಿ ೧೬೫ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇದ್ದರೂ ಇತ್ತೀಚಿನ ಸರ್ಕಾರಿ ಆದೇಶ ಕ್ರಮಾಂಕ: ಆರ್‌ಡಿ ೧೯೦ ಬಿಎಸ್‌ಸಿ ೮೬, ದಿನಾಂಕ: ೨೬-೪-೧೯೮೮ರಲ್ಲಿ ಮಂಡಲ ಪಂಚಾಯಿತಿಗಳ ರಚನೆಗಳ ತತ್ಪರಿಣಾಮವಾಗಿ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೨೦೫ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಕಡಿಮೆಗೊಳಿಸಲಾಗಿದೆ,

(ಆ) ಬದಲಾದ ಪರಿಸ್ಥಿತಿಯಲ್ಲಿ ಪ್ರಸ್ತುತ ಭರ್ತಿ ಮಾಡಲು ಅಸ್ಪದವಿಲ್ಲ.

(ಇ) ಹೌದು.

(ಈ) ಮತ್ತು (ಉ) ರಾಜ್ಯದಲ್ಲಿ ಮಂಡಲ ಪಂಚಾಯಿತಿಗಳ ರಚನೆಯಿಂದಾಗಿ ಕಂದಾಯ ಇಲಾಖೆಯ ೭೦೯ ಪ್ರ.ದ.ಸ.ರನ್ನು ಪ್ರತಿ ನಿಯೋಜನೆ ಮೇಲೆ ನೇಮಕ ಮಾಡಲಾಗಿದ್ದು, ತತ್ಪರಿಣಾಮವಾಗಿ ಉದ್ಭವಿಸಿರುವ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಯನ್ನು ತೊಡೆದು ಹಾಕಿ ಹಾಲಿ ಗ್ರಾಮಲೆಕ್ಕಿಗರು ಮತ್ತು ದ್ವಿತೀಯ ದರ್ಜೆ ಸಹಾಯಕರಿಗೆ ೬೦:೪೦ರ ಅನುಪಾತದಲ್ಲಿ ಮುಂಬಡ್ತಿ ನೀಡಲು ಪ್ರಸ್ತುತ ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಾತ್ಕಾಲಿಕ ತಿದ್ದುಪಡಿ ಮಾಡಲಾಗಿದೆ. ಹೀಗೆ ಹಾಲಿ ಗ್ರಾಮಲೆಕ್ಕಿಗರಿಗೆ ಬಡ್ತಿ ನೀಡುವ ಮೂಲಕ ತೆರವಾಗುವ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಾಧ್ಯತೆಯನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.